**‘ಕಲ್ಲು–ಮಣ್ಣು–ದೂಳು... ಇವೆಲ್ಲ ಒಂದನ್ನು ಬಿಟ್ಟು ಒಂದಿರಲಾರದಷ್ಟು ಈ ನೆಲದ ಗಟ್ಟಿಯಾದ ನೆಂಟರೇ ಆಗಿರುವುದರಿಂದ ದೂಳು ಮನೆ ಮೇಲಾಗಲೀ ಒಳಗಾಗಲೀ ಬಿದ್ದಿರುವುದಕ್ಕೂ ನಿಗೂಢಾರ್ಥಗಳಿವೆ ಎಂಬುದನ್ನು ಆತನ ಸಮ್‌ಶೋಧನಾ ಮನಸ್ಸು ಅರಿತುಕೊಳ್ಳಲಾಗಿ, ಕೊನೆಗೂ ತನ್ನ ರೂಮಿನ ಮೇಲೆ ಈ ಕಲ್ಲು ಬೀಳದಿರುವ ಸಂಗತಿಯ ಹಿಂದಿನ ಮೂರು ಮುಖ್ಯ ಕಾರಣಗಳು ಒಂದು ದಿನ ಆತನ ಕವಿಮನಕ್ಕೆ ಪಕ್ಕಾ ಆಗಿಯೇ ಬಿಟ್ಟವು!**

ಧಾರವಾಡ ಅಂದಾಕ್ಷಣ ಯಾವಾಗಲೂ ಕುತೂಹಲಿಗಳಿಗೆ ಪುರಾತನ ಜೋಕೊಂದು (ಮಾತೊಂದು) ಓಡೋಡಿಕೋತ ಬಂದು ಮುಖಕ್ಕೆ ಪಟಾರೆಂದು ಹೊಡೆದು ಎದುರು ನಿಂತುಕೊಳ್ಳುತ್ತದೆ. ‘ಧಾರವಾಡದಲ್ಲಿ ಯಾವುದೇ ಮೂಲೆಯಲ್ಲಿ ನಿಂತು ಕಲ್ಲು ಒಗೆದರೂ ಅದು ಆ ಊರಿನ ಕವಿಗಳ ಅಥವಾ ಸಂಗೀತಗಾರರ ಮನೆಗಳ ಮೇಲೆಯೇ ಹೋಗಿ ಬೀಳುತ್ತದೆ’ ಎಂಬ ಸಂಗತಿಯನ್ನು ಆತನೂ ಕೇಳಿದ್ದ. ಕವನ ಗಿವನ ಅಂತಾ ಒಂಚೂರು ಬರೆಯುವುದನ್ನು ಹೈಸ್ಕೂಲಿನಲ್ಲಿಯೇ ರೂಢಿಸಿಕೊಂಡಿದ್ದ ಆತ ಆ ಕಾರಣಕ್ಕಾಗಿಯೂ ಧಾರವಾಡದಲ್ಲಿಯೇ ಓದು ಕೈಗೊಳ್ಳಲು ನಿರ್ಧರಿಸಿ, ಅಪ್ಪನ ಜೊತೆ ಜಗಳವಾಡಿ ಅಂತೂ ಇಂತೂ ಮಾಡಿ ಧಾರವಾಡವನ್ನು ಸೇರಿಯೇ ಬಿಟ್ಟ!

ಧಾರಾನಗರಿ ಸೇರಿಕೊಂಡ ಮರುದಿನದಿಂದಲೇ ಸಾಧನಕೇರಿ, ಕೆಲಗೇರಿ, ಕಲ್ಯಾಣನಗರ, ಶ್ರೀನಗರ, ಯುರೇಕಾ ಕಾಲನಿ, ಬೆಳಗಾವಿ ರೋಡು, ವಿದ್ಯಾಗಿರಿ, ಕವಿವಿ ಆವರಣ, ಮೊದಲಾಗಿ ಕವಿಗಳಿದ್ದ ಮನೆಗಳನ್ನು, ಅವರು ಅಡ್ಡಾಡಿದ ಓಣಿಗೀಣಿಗಳನ್ನು ಕಾಲಿನಲ್ಲಿ ನಾಯಿಗೆರಿ ಇದ್ದವರಂತೆ ತಿರುಗಾಡಿ ಎಡತಾಕಿದ. ಆ ಸಂದರ್ಭದಲ್ಲಿ ಅಲ್ಲೆಲ್ಲೋ ಒಳಂಗಿಯಲ್ಲೋ ಬರೀಮೈಯಲ್ಲೋ ಅಂಗಳದಿ ಓಡಾಡುತ್ತಿರುವ ಉರ್ಫ್ ವಾಕ್ ಮಾಡುತ್ತಿರುವ ಕೆಲವುಮಂದಿ ಹಿರಿಯ ಕವಿಕುಲತಿಲಕರನ್ನು ಕಂಡು ಕಣ್ಣುತುಂಬಿಕೊಂಡ; ನಿಂತಲ್ಲಿಯೇ ಬಹುಹೊತ್ತು ನಿಂತು ವಿಪರೀತ ಅನ್ನುವಷ್ಟು ಕನಸೂ ಕಂಡೂಬಿಟ್ಟ! ಈತ ಹೀಗೆ ನಿಂತಲ್ಲಿಯೇ ನಿಂತು ಈ ಪರಿ ನೋಡುವುದನ್ನು ಕಂಡೂ ಕಾಣದಂತೆ ಆ ಕವಿವರೇಣ್ಯರು ತಮ್ಮ ಹರತಕ್ಕೆ ತಾವು ಆ ಕಂಪೌಂಡೊಳಗೇ ಸುತ್ತು ಹಾಕುತ್ತ ಏನನ್ನೋ ಲೆಕ್ಕಾಚಾರ ಹಾಕುತ್ತಿರುವಂತೆ ಕಂಡದ್ದನ್ನು ಈತ ಹಲವು ಯಾಂಗಲ್‌ಗಳಿಂದ ಮನದೊಳಗೆ ವಿಶ್ಲೇಷಿಸುತ್ತಲೂ ತೀವ್ರ ಕುತೂಹಲಕ್ಕೀಡಾಗಿ, ಕೆಲಕವಿಗಳ ಮನೆಮೇಲೇನಾದರೂ ಯಾರಾದರೂ ಒಗೆದ ಕಲ್ಲುಗಳು ಹಾಗೇ ನಿಂತುಕೊಂಡಿವೆಯೇ? ಎಷ್ಟು ಹಂಚು ಒಡೆದಿರುವವೋ ಏನೋ? ಎಂದು ಮುಂತಾಗಿ ಯೋಚನೆಗೆ ಬಿದ್ದು ನಿಂತುಕೊಂಡಲ್ಲಿಯೇ ಸಂಜೆ ಮಾಡಿಕೊಂಡು ಅಂತೂ ತನ್ನ ಪಾಲಿನ ಅರಮನೆ ಎಂದೇ ಭಾವಿಸಿದ ಆ ರೂಮು ತಲುಪಿದ. ಅಲ್ಲಿದ್ದ ಅನಾದಿಕಾಲದ ಪಳಯುಳಿಕೆಯಂತಿದ್ದ ಆ ಕಾಟೆಂಬ ಪಲ್ಲಂಗದ ಮೇಲೆ ಅಂಗಾತ ಒರಗಿಕೊಂಡ.

ಹೊಸಗಿರಾಕಿಬಂದಖುಷಿಯಲ್ಲಿಬಿಳಿಚಿಗೊಂಡಿದ್ದ ತಗಣಿಗಣವು ಕಾರ್ಯೋನ್ಮುಖವಾಗಲು ಏಕದಂ ಎಚ್ಚರಗೊಂಡ. ಅವು ಕಡಿದ ಮೇಲೆಯೇ ಹಸಿವೆಯೆಂದರೇನೆಂಬುದರ ಗಾಢ ಅರಿವು ಒತ್ತರಿಸಿಕೊಂಡು ಬಂದು ಮಂಚದ ಕೆಳಗಿನ ಸೀಮೆಎಣ್ಣೆ ಸ್ಟವ್‌ನ ಮೇಲಿಟ್ಟ ದಬರಿಯೆಡೆಗೆ ಒಂದೇ ಗುಕ್ಕಿಗೆ ಕೈ ಹಾಕಿದ. ಬೆಳಿಗ್ಗೆ ಮಾಡಿಟ್ಟುಹೋಗಿದ್ದ ಅನ್ನಕ್ಕೆ ಸಾರು ಮಾಡಿಟ್ಟರದಿದ್ದರಿಂದ ಉಪ್ಪಿನಕಾಯಿ ರಸ ಮತ್ತು ಗುರೆಳ್ಳುಹಿಂಡಿಯನ್ನು ಕಲಸಿಕೊಂಡು ಗಬಗಬನೇ ಒಳಕ್ಕೆ ಸೇರಿಸಿಕೊಂಡ.

ಒಂದಿಡೀ ದಿನ ಗಸ್ತು ಹೊಡೆದಿದ್ದರಿಂದಾಗಿ ಕಾಟಿನ ಮೇಲೆ ಬಿದ್ದುಕೊಂಡೊಡನೇ ಕಣ್ಣುಮುಚ್ಚಿದ. ಧಾರಾನಗರಿಯ ಓಣಿಗಳು, ತಗ್ಗು ಉಬ್ಬುಗಳು, ಕವಿಗಳ ಚಿತ್ರಗಳು, ಅವರು ನಡೆದಾಡುತ್ತಿದ್ದ ಭಂಗಿಗಳು... ಒಂದೊಂದೇ ತಲೆಯಲ್ಲಿ ಗಿರಕಿ ಹೊಡೆಯತೊಡಗಿದವು. ಹಿರಿಯ ಕವಿಯೊಬ್ಬರಿಗೆ ತಾ ಬರೆದ ಪದ್ಯಗಳ ನೋಟ್ ಬುಕ್ಕು ತೋರಿಸಿ, ‘ಥೂ... ಮಂಗ್ಯಾನನ ಮಗನೇ, ಇವು ಕವಿತೆಗಳೇನೋ? ನೀ ಹೀಂಗ ಬರ್ಕಂತ ಹೋದ್ರ ಕನ್ನಡಾನೂ, ಹಿರಿಯ ಕವಿಗಳ ಮಾನಮರ್ಯಾದೆಯನ್ನು ಹರಾಜು ಹಾಕಿಬಿಡ್ತೀ... ಪದ್ಯ ಬರೀತಾನಂಥ ಪದ್ಯ. ದರಿದ್ರ, ಹೋಗಿ ಮದ್ಲು ಒಂದ್ ಅಂಕಲಿಪಿ ತಗೊಂಡ್ ಹೊಳ್ಳಾಮಳ್ಳಾ ಇಡೀ ಪುಸ್ತಕಾನ ಇಪ್ಪತ್ ಸಲ ಬರೀ. ಈಗೇನು ನೀ ಬರ್ದಿಯಲ್ಲ, ಆ ಕವನಾನ ಹೊಳ್ಳಿ ನೋಡಲಾರದ್ಹಂಗ ಆ ಅಲ್ಲಿ ಕಾಣ್ತದಲ್ಲ ಆ ಕೆರಿಯಾಗ ಒಗ್ದ್ ಹೋಗ್. ಅಷ್ಟು ಮಾಡಿದ ಮ್ಯಾಲ ಮತ್ತ ಬಂದ್ ನನ್ ತಲೀ ತಿನ್ನಬ್ಯಾಡ. ಬೇರೆ ಕವಿಗಳ್ಯಾರಾದ್ರು ಸಿಕ್ರ ಅವರೀಗ ತೋರ್‍ಸಿ, ಅವರು ಹೊಡದ್ರ ಹೊಡಿಸ್ಗಂಡ್ ಸಾಯೀ’ ಎಂದು ಅವರ ಕೈಲಿ ಬೈಯಿಸಿಕೊಂಡು ಗೇಟಿಂದ ಹೊರಹಾಕಿಸಿಕೊಂಡವನಂತೆ ಕನಸು ಕಂಡು ಒಮ್ಮಿಲೇ ಕಾಟಿಂದ ಕೆಳಗೆ ಕುಮಟಿಬಿದ್ದ. ಸಾವರಿಸಿಕೊಂಡು ಎದ್ದು ಕುಂತನಾದರೂ ಎದೆಬಡಿತದ ಸದ್ದು ಜೋರಾಗುತ್ತಲೇ ಇತ್ತು. ಈ ಸದ್ದು ಹೊರಗೇನಾದರೂ ಕೇಳಿಸುತ್ತದೆಯೇ? ಎಂದು ನಡುಗುತ್ತಲೇ ಮಧ್ಯರಾತ್ರಿಯಲ್ಲಿ ಬಾಗಿಲು ತೆಗೆದು ಹೊರಹೋಗಿ ಒಮ್ಮೆ ಕನ್‌ಫರ್ಮ್ ಮಾಡಿಕೊಂಡು ನಿಡಿದಾದ ನಿಟ್ಟುಸಿರೊಂದನ್ನು ಬಿಟ್ಟು ರೂಮ್‌ಮೇಟ್ ಕಡೆ ನೋಡಿದ. ಅವನು ನಿದ್ದೆಹೋದ ನೆಮ್ಮದಿಯಲ್ಲಿ ಏನಾದರೂ ಓದಿಯೇ ಮಲಗಬೇಕೆಂದು ನಿರ್ಧರಿಸಿದ. ಫುಟ್‌ಪಾತಿನಲ್ಲಿ ಹತ್ತು ರೂಪಾಯಿ ಕೊಟ್ಟು ಹತ್ತು ಮಹತ್ವದ ಸಾಹಿತಿಗಳ ಇಪ್ಪತ್ತು ಕೃತಿಗಳನ್ನು ತಂದಿಟ್ಟುಕೊಂಡಿದ್ದು ನೆನಪಾಗಿ, ಅದರಲ್ಲೊಂದನ್ನು ಹಿಡಿದು ಓದತೊಡಗಿದ. ಬೆಳಿಗ್ಗೆ ಎದ್ದಾಗ ಆತ ಓದುತ್ತಿದ್ದ ಬುಕ್ಕೂ ಆತನ ಮುಖದಮೇಲೆಯೇ ಮಲಗಿತ್ತು.

ಎದ್ದಾದ ಮೇಲೆ ಕರಿ ಚಾ ಮಾಡಿಕೊಂಡು ಕುಡಿದು ಅದೇ ಬುಕ್ಕನ್ನು ಮತ್ತೊಮ್ಮೆ ಹಿಡಕೊಂಡು ಗಂಭೀರ ಓದಿಗೆ ಮುಂದಾದ. ತಲೆ ಕೆರೆದುಕೊಂಡು ಹೊಳ್ಳಾಮಳ್ಳಾ ಓದಿದರೂ ತಳಾಬುಡಾ ಒಂದೂ ಅರ್ಥವಾಗದೇ, ‘ಏನ್ ಬರೀತಾರ ಏನಪಾ, ಹಗ್ಲೀ ಮುಗ್ಲೀ ಓದಿದ್ರೂ ಒಂದ್ ಸಾಲೂ ಅರ್ಥ ಆಗವಲ್ದು. ಮತ್ತ ಇದ್ಕ ಎಂಥದೋ ಪೀಠದ ಪ್ರಶಸ್ತಿ ಬ್ಯಾರೆ ಸಿಕ್ಕೇತಂತ. ಅದರ ಮ್ಯಾಲನ ಹಂಗಂಥ ಬರ್ದಾರ. ನನ್ ಹಂಗ ಸರಳವಾಗಿ ಪ್ರಾಸಾ ಹಚ್ಚಿ ಬರೀಯಾಕ ಏನ್ ಧಾಡಿ ಅಂತನಿ ಇವರೀಗ. ಮತ್ ಈ ಪುಸ್ತಕ ಮಹಾಕವಿಗಳದ್ದು ಬ್ಯಾರೆ. ಛೆ... ಇನ್‌ಮ್ಯಾಕ್ ಈ ಅವಾರ್ಡ ಪುಸ್ತಕ ಮೂಸಿನೂ ನೋಡಲ್ಲ!’ ಎಂದು ಮನದೊಳಗೇ ಪ್ರತಿಜ್ಞೆ ಮಾಡಿ, ಹೊಸ ಸಿನಿಮಾ ಹಾಡುಗಳ ಬುಕ್ಕು ಹಿಡಕೊಂಡು ಗಟ್ಟಿಯಾಗಿ ಹಾಡಲು ಶುರು ಮಾಡಿದ. ರೂಮ್ ಪಾರ್ಟನರ್ ಒಮ್ಮೆಲೇ ಎದ್ದು ಕುಂತು, ‘ಏನಾತೋಲೇ ನಿಂಗ... ತಲಿ ಹ್ವಾತಗೀತನೂ ಮತ್ತ್..!’ ಅಂತಾ ಬೈದು ಮತ್ತೆ ಚದ್ದಾರ ಏರಿಸಿಕೊಂಡು ಮಲಗಿದ. ಈತ ಮಾತ್ರ ತನ್ನ ಮೊದಲ ದಿನದ ಕಾಲೇಜು ಟೈಮ್‌ನ್ನು ಮೀರಬಾರದೆನ್ನಿಸಿ ಆಲ್ಟರ್ ಮಾಡಿಸಿದ ಹಳೇ ಪ್ಯಾಂಟು ಮತ್ತು ಕಳೆದ ದೀಪಾವಳಿಗೆ ಅಪ್ಪ ಹೊಲಿಸಿದ್ದ ಹಸಿರು ಕಲರಿನ ಅಂಗಿತೊಟ್ಟು, ಅಲುಗಾಡುತ್ತಲೇ ಆ ಕವಿತಾಗಳಿದ್ದ ನೋಟ್ ಬುಕ್‌ನ ಹಿಡಕೊಂಡು ಸಪ್ತಾಪುರ ಬಾವಿ ಮೇಲೆ ಹಾಸಿ ಕರ್ನಾಟಕ ಕಾಲೇಜ್ ಆವರಣವನ್ನು ಅಧಿಕೃತವಾಗಿ ತಲುಪಿ ಕಣ್ಣಾಡಿಸಿದ. ಗಾಬರಿಗೂ ಬಿದ್ದ.

***

ಪದವಿಪೂರ್ವ ಶಿಕ್ಷಣವನ್ನು ತನ್ನ ತಾಲೂಕಾ ಸ್ಥಳದಲ್ಲೇ ಕಲಾ ವಿಭಾಗದಲ್ಲಿ ಪೂರೈಸಿದ್ದ ಈತ, ಬಿ.ಎ. ಪದವಿಯೆಂಬ ಹೆಚ್ಚಿನ ವ್ಯಾಸಂಗಕ್ಕಾಗಿ ಕರ್ನಾಟಕ ಕಾಲೇಜನ್ನೇ ಅವರಿವರ ಹಿತನುಡಿಗಳನ್ನಾಲಿಸಿ ಆಯ್ಕೆಮಾಡಿಕೊಂಡಿದ್ದ. ಹೀಗೇ ಒಂದುವಾರೊಪ್ಪತ್ತಾದರೂ ಕಾಲೇಜಿನ ವಾತಾವರಣಕ್ಕೆ ಮತ್ತು ಉಪನ್ಯಾಸಕರು ಹೆಚ್ಚಾಗಿ ಇಂಗ್ಲೀಷ್‌ನಲ್ಲೇ ಬೋಧಿಸುತ್ತಿದ್ದುದರಿಂದ ಹೊಂದಾಣಿಕೆ ಅಂಬುದು ಕಷ್ಟಸಾಧ್ಯವಾಗಿ ಪರಿಣಮಿಸಿತು. ಕೊನೆಗೆ ಕನ್ನಡ ಮೀಡಿಯಮ್‌ನಲ್ಲಿ